ಕರ್ನಾಟಕ ವಿಧಾನ ಪರಿಷತ್

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 674

2 ಸದಸ್ಯರ ಹೆಸರು : ಶ್ರೀ. ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು)

3 ಉತ್ತರಿಸುವ ದಿನಾಂಕ : 17.12.2021

4 ಉತ್ತರಿಸುವ ಸಚಿವರು : ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

******

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ 5 ವರ್ಷಗಳಿಂದ ವಿಧಾನ ಪರಿಷತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ವಾರ್ಷಿಕ ಅನುದಾನ ಬಿಡುಗಡೆಯಲ್ಲಿ ಗೊಂದಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು; (ವಿವರ ನೀಡುವುದು)</td><td>ಹೌದು

2020-21ನೇ ಸಾಲಿನಲ್ಲಿ ಕೋವಿಡ್-19ರ ಕಾರಣದಿಂದ ಶಾಸಕರ ಪ್ರದೇಶಾಭಿವೃದ್ಧಿಯ ಅನುದಾನವನ್ನು ಪ್ರತಿ ಕ್ಷೇತ್ರಕ್ಕೆ ರೂ.1.00 ಕೋಟಿಗಳಿಗೆ ಮಿತಿಗೊಳಿಸಲಾಗಿದೆ. ಉಳಿದಂತೆ 2013-14ನೇ ಸಾಲಿನಿಂದ ಪ್ರತಿ ಕ್ಷೇತ್ರಕ್ಕೆ ರೂ.2.00 ಕೋಟಿಗಳ ಅನುದಾನವು ನಿಗದಿಯಾಗಿದ್ದು, ಪ್ರತಿ ವರ್ಷವಾರು ರೂ.2.00 ಕೋಟಿಗಳ ಅನುದಾನವನ್ನು ಕಳೆದ 5 ವರ್ಷಗಳಿಂದ ಬಿಡುಗಡೆ ಗೊಳಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table><tr><td>2017-18</td><td>200.00</td></tr><tr><td>2018-19</td><td>165.00</td></tr><tr><td>2019-20</td><td>165.00</td></tr><tr><td>2020-21</td><td>100.00</td></tr><tr><td>2021-21</td><td>100.56</td></tr></table>2018-19ನೇ ಸಾಲಿನಲ್ಲಿ ಭಂಡವಾಳ ವೆಚ್ಚದಡಿ ಎಲ್ಲಾ ಕ್ಷೇತ್ರಗಳಿಗೆ ಬಿಡುಗಡೆ ಬಾಕಿ ಇರುವ ರೂ. 127.69 ಕೋಟಿಗಳನ್ನು ಬಿಡುಗಡೆಮಾಡಲು ಆರ್ಥಿಕ ಇಲಾಖೆಯು ಸಹಮತಿ ನೀಡಿದೆ. ಡಿಸಂಬರ್ ಮಾಹೆಯ ನಂತರ ಬಿಡುಗಡೆಮಾಡಲಾಗುವುದು.

2019-20ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ರೂ.737.90 ಕೋಟಿಗಳ ಅನುದಾನ ಲಭ್ಯವಿದ್ದ ಕಾರಣ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ ಹೊರತು ಪಡಿಸಿ ಭಂಡವಾಳ ವೆಚ್ಚದ ಒಂದು ಕಂತಿನ ಅನುದಾನ ಬಿಡುಗಡೆಗೆ ಬಾಕಿ ಇರುತ್ತದೆ. ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿರುವ ಅನುದಾನದಲ್ಲಿ ಶೇಕಡ 75%ರಷ್ಟು ವೆಚ್ಚವಾದ ನಂತರ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ.</td></tr>
</table>

........2.,

		2021-22ನೇ ಸಾಲಿನಲ್ಲಿ ಪ್ರತಿ ಕ್ಷೇತ್ರಕ್ಕೆ 2 ಕಂತುಗಳ ಅನುದಾನವು ಬಿಡುಗಡೆಯಾಗಿದ್ದು, 3ನೇ ಕಂತಿನ ಅನುದಾನವನ್ನು ನೀತಿ ಸಂಹಿತೆ ಮುಗಿದ ನಂತರ ಬಿಡುಗಡೆ ಮಾಡಲಾಗುವುದು.
(ಆ)	2018-19 ರಿಂದ 2020-21ನೇ ಸಾಲಿನ ವಾರ್ಷಿಕ ಅನುದಾನದ ಬಿಡುಗಡೆಯಲ್ಲಿ ಗೊಂದಲಗಳ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)	ಯಾವುದೇ ಗೊಂದಲ ವಿರುವುದಿಲ್ಲ.
(ಇ)	ವಿಧಾನ ಪರಿಷತ್ತು ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ವಾರ್ಷಿಕ ಅನುದಾನದ ಬಿಡುಗಡೆ ಮತ್ತು ವಿನಿಯೋಗದಲ್ಲಿ ತಾಂತ್ರಿಕ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ? (ವಿವರ ನೀಡುವುದು)	ಯಾವದೇ ತಾಂತ್ರಿಕ ತೊಂದರೆಗಳಿರುವುದಿಲ್ಲ.

ಸಂಖ್ಯೆ: ಪಿಡಿಎಸ್ 136 ಕೆಎಲ್ಎಸ್ 2021

(ಮುನಿರತ್ನ)
ಸಚಿವರು
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ